A

CCE RF/RR/ PF/PR

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,
ಮಲ್ಲೇಶ್ವರಂ, ಬೆಂಗಳೂರು – 560 003

KARNATAKA SCHOOL EXAMINATION AND ASSESSMENT BOARD,
MALLESHWARAM, BENGALURU – 560 003

ಮೇ 2026 ರ ಪರೀಕ್ಷೆ - 2

MAY 2026 EXAMINATION - 2

ಮಾದರಿ ಉತ್ತರಗಳು

MODEL ANSWERS

ಸಂಕೇತ ಸಂಖ್ಯೆ : 85-K

CODE NO. : 85-K

ವಿಷಯ : ಸಮಾಜ ವಿಜ್ಞಾನ

Subject : SOCIAL SCIENCE

(ಕನ್ನಡ ಮಾಧ್ಯಮ / Kannada Medium)

(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ)

(Regular Fresh / Regular Repeater / Private Fresh / Private Repeater)

ದಿನಾಂಕ : 23. 05. 2026] **[ಗರಿಷ್ಠ ಅಂಕಗಳು : 80**

Date : 23. 05. 2026] **[Max. Marks : 80**

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
I.	ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : **8 × 1 = 8**	
1.	ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟ ಶಾಸನ (A) 1935 ರ ಭಾರತದ ಸರ್ಕಾರದ ಕಾಯಿದೆ (B) 1919 ರ ಭಾರತದ ಸರ್ಕಾರದ ಕಾಯಿದೆ (C) 1909 ರ ಭಾರತೀಯ ಪರಿಷತ್ ಕಾಯಿದೆ (D) 1892 ರ ಭಾರತೀಯ ಪರಿಷತ್ ಕಾಯಿದೆ *ಉತ್ತರ :* (A) 1935 ರ ಭಾರತದ ಸರ್ಕಾರದ ಕಾಯಿದೆ	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
2.	1942 ರ ಸ್ಟಾಲಿನ್‌ಗ್ರಾಡ್ ಯುದ್ಧದಲ್ಲಿ ಜರ್ಮನ್ ಪಡೆಗಳನ್ನು ಸೋಲಿಸಿದ ದೇಶ (A) ಅಮೆರಿಕಾ ಸಂಯುಕ್ತ ಸಂಸ್ಥಾನ (B) ರಷ್ಯಾ (C) ಫ್ರಾನ್ಸ್ (D) ಬ್ರಿಟನ್ ***ಉತ್ತರ :*** (B) ರಷ್ಯಾ	1
3.	'ಜಾಗತಿಕ ಸಂಸತ್ತು' ಎಂದು ಕರೆಯಲ್ಪಡುವ ವಿಶ್ವಸಂಸ್ಥೆಯ ಪ್ರಧಾನ ಅಂಗ ಸಂಸ್ಥೆ (A) ಭದ್ರತಾ ಮಂಡಳಿ (B) ದತ್ತಿ ಸಮಿತಿ (C) ಸಾಮಾನ್ಯ ಸಭೆ (D) ಸಚಿವಾಲಯ ***ಉತ್ತರ :*** (C) ಸಾಮಾನ್ಯ ಸಭೆ	1
4.	'ಅಪ್ಪಿಕೋ' ಚಳವಳಿಯು ಪ್ರಾರಂಭವಾದ ಜಿಲ್ಲೆ (A) ದಕ್ಷಿಣ ಕನ್ನಡ (B) ತೆಹ್ರಿ-ಘರ್ವಾಲ್ (C) ಪಾಲ್ಘಾಟ್ (D) ಉತ್ತರ ಕನ್ನಡ ***ಉತ್ತರ :*** (D) ಉತ್ತರ ಕನ್ನಡ	1
5.	ಭಾರತದಲ್ಲಿ ಅತೀ ಹೆಚ್ಚು ಮಳೆ ಪಡೆಯುವ ಪ್ರದೇಶ (A) ಮಾಸಿನ್‌ರಾಮ್ (B) ರೂಯ್ಲಿ (C) ಗಂಗಾನಗರ (D) ಆಗುಂಬೆ ಪ್ರದೇಶ ***ಉತ್ತರ :*** (A) ಮಾಸಿನ್‌ರಾಮ್	1
6.	ಈ ಕೆಳಗಿನವುಗಳಲ್ಲಿ ಆಂಧ್ರಪ್ರದೇಶದಲ್ಲಿರುವ ನೈಸರ್ಗಿಕ ಬಂದರು (A) ಚೆನ್ನೈ (B) ವಿಶಾಖಪಟ್ಟಣ (C) ಮಂಬೈ (D) ಗೋವಾ ***ಉತ್ತರ :*** (B) ವಿಶಾಖಪಟ್ಟಣ	1
7.	ಕೇಂದ್ರ ಸರ್ಕಾರದ ಆಯವ್ಯಯವನ್ನು ಲೋಕಸಭೆಯಲ್ಲಿ ಮಂಡಿಸುವವರು (A) ಮುಖ್ಯಮಂತ್ರಿಗಳು (B) ಪ್ರಧಾನ ಮಂತ್ರಿಗಳು (C) ಕೇಂದ್ರ ಹಣಕಾಸು ಸಚಿವರು (D) ರಾಜ್ಯ ಹಣಕಾಸು ಸಚಿವರು ***ಉತ್ತರ :*** (C) ಕೇಂದ್ರ ಹಣಕಾಸು ಸಚಿವರು	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
8.	ರವಿಯು ಓರ್ವ ಪ್ರಸಿದ್ಧ ಉದ್ಯಮಿಯಾಗಿದ್ದು, ತನ್ನ ಉದ್ಯಮಕ್ಕೆ ಸಂಬಂಧಿಸಿದಂತೆ ಆತನು ಹೊಂದಿರುವ ಬ್ಯಾಂಕ್ ಖಾತೆ (A) ನಿಶ್ಚಿತ ಠೇವಣಿ ಖಾತೆ (B) ಉಳಿತಾಯ ಖಾತೆ (C) ಆವರ್ತ ಠೇವಣಿ ಖಾತೆ (D) ಚಾಲ್ತಿ ಖಾತೆ ***ಉತ್ತರ :*** (D) ಚಾಲ್ತಿ ಖಾತೆ	1
II.	**ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು :** **8 × 1 = 8**	
9.	ಕೆ. ಶೇಷಾದ್ರಿ ಅಯ್ಯರ್‌ರವರು ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗಳನ್ನು ಏಕೆ ಪ್ರಾರಂಭಿಸಿದರು ? ***ಉತ್ತರ :*** ಆಡಳಿತ ಸೇವೆಗಾಗಿ ಪ್ರತಿಭಾವಂತ ಯುವಕರನ್ನು ಆಯ್ಕೆ ಮಾಡಿಕೊಳ್ಳಲು.	1
10.	ಹಿಟ್ಲರ್‌ನು ಗೋಬೆಲ್ಸ್ ಎಂಬ ವಿಶೇಷ ಮಂತ್ರಿಗಳನ್ನು ಏಕೆ ನೇಮಿಸಿದನು ? ***ಉತ್ತರ :*** ಜನಾಂಗೀಯ ದ್ವೇಷವನ್ನು ಬೆಳೆಸಲು.	1
11.	ಸಾರ್ಕ್‌ನ ಕೇಂದ್ರ ಕಛೇರಿ ಎಲ್ಲಿದೆ ? ***ಉತ್ತರ :*** ನೇಪಾಳದ ಕಠ್ಮಂಡುವಿನಲ್ಲಿದೆ.	1
12.	ಪೂರ್ವಾಗ್ರಹವನ್ನು ವ್ಯಾಖ್ಯಾನಿಸಿ. ***ಉತ್ತರ :*** ಒಬ್ಬ ವ್ಯಕ್ತಿ ಅಥವಾ ಒಂದು ಸಮೂಹದ ಬಗ್ಗೆ ಹೊಂದಿರಬಹುದಾದ ಪೂರ್ವ ನಿರ್ಧಾರಿತ ಮನೋಭಾವನೆ.	1
13.	ಆತ್ಮಗೌರವ ಚಳವಳಿಯನ್ನು ಯಾರು ಪ್ರಾರಂಭಿಸಿದರು ? ***ಉತ್ತರ :*** ಇ.ವಿ. ರಾಮಸ್ವಾಮಿ ನಾಯ್ಕರ್	1
14.	ಭಾರತದ ಮೊದಲ ಕಾಗದ ಕೈಗಾರಿಕೆಯನ್ನು ಯಾವ ವರ್ಷದಲ್ಲಿ ಸ್ಥಾಪಿಸಲಾಯಿತು ? ***ಉತ್ತರ :*** 1840	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
15.	ಅಧಿಕಾರ ವಿಕೇಂದ್ರೀಕರಣ ಎಂದರೇನು ? ***ಉತ್ತರ :*** ಪ್ರತಿಯೊಂದು ಹಳ್ಳಿಯ ಆಡಳಿತದ ಅಧಿಕಾರ ಹಾಗೂ ಹಳ್ಳಿಯ ಅಭಿವೃದ್ಧಿಯ ಜವಾಬ್ದಾರಿಯನ್ನು ಹಳ್ಳಿಯ ಜನರಿಗೆ ನೀಡುವುದು.	1
16.	ಎಂಟ್ರಪ್ರೆಂಡೆ ಎಂಬ ಪದವು ಯಾವ ಭಾಷೆಯಿಂದ ಬಂದಿದೆ ? ***ಉತ್ತರ :*** ಫ್ರೆಂಚ್ ಭಾಷೆ	1
III.	**ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವುದು : 8 × 2 = 16**	
17.	"ಸಾರ್ವಜನಿಕ ಆಡಳಿತವು ವ್ಯಕ್ತಿಯ ಜನನದಿಂದ ಮರಣದವರೆಗೆ ಅಗತ್ಯವಾದ ಸೇವೆಗಳನ್ನು ಒದಗಿಸುತ್ತದೆ." ಸಮರ್ಥಿಸಿ. ***ಅಥವಾ*** "ಅಂತರರಾಷ್ಟ್ರೀಯ ಮಟ್ಟದ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಐ.ಎಮ್.ಎಫ್. ನ ಪಾತ್ರವು ಪ್ರಶಂಸನೀಯವಾದುದು" ಹೇಗೆ ? ***ಉತ್ತರ :*** — ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುತ್ತದೆ — ಜನರ ಪ್ರಾಣ ಮತ್ತು ಆಸ್ತಿಯನ್ನು ರಕ್ಷಿಸುತ್ತದೆ — ನ್ಯಾಯ ಒದಗಿಸುತ್ತದೆ — ಶಿಕ್ಷಣ ನೀಡುತ್ತದೆ — ಉದ್ಯೋಗ ಅವಕಾಶಗಳನ್ನು ಕಲ್ಪಿಸುತ್ತದೆ — ಅವಶ್ಯಕ ವಸ್ತುಗಳನ್ನು ಪೂರೈಸುತ್ತದೆ — ಆರ್ಥಿಕ ಸಮಾನತೆಯನ್ನು ಉಂಟುಮಾಡುತ್ತದೆ — ರಾಷ್ಟ್ರ ರಕ್ಷಣೆ (ಯಾವುದಾದರೂ ನಾಲ್ಕು) 4 × ½ ***ಅಥವಾ***	2

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	— ಅಂತರರಾಷ್ಟ್ರೀಯ ಮಟ್ಟದ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಯತ್ನಿಸುತ್ತದೆ. — ವಿಶ್ವ ವಾಣಿಜ್ಯ ವ್ಯವಹಾರದ ಬೆಳವಣಿಗೆಗೆ ಸಹಕಾರ, ಆರ್ಥಿಕ ಸ್ಥಿರತೆಗೆ ಸಹಕಾರ ಮತ್ತು ಉತ್ತಮ ವಿದೇಶಿ ಪಾವತಿ ಸಮತೋಲನವನ್ನು ಕಾಯ್ದುಕೊಳ್ಳಲು ಸಹಕಾರ 1 + 1	2
18.	ಬಾಲ ಕಾರ್ಮಿಕ ಸಮಸ್ಯೆಯ ದುಷ್ಪರಿಣಾಮಗಳನ್ನು ಪಟ್ಟಿ ಮಾಡಿ. ***ಅಥವಾ*** ಅಸ್ಪೃಶ್ಯತಾ ನಿವಾರಣೆಯ ಸಂವಿಧಾನಾತ್ಮಕ ಹಾಗೂ ಶಾಸನಾತ್ಮಕ ಕ್ರಮಗಳನ್ನು ಪಟ್ಟಿಮಾಡಿ. ***ಉತ್ತರ :*** — ಮಕ್ಕಳ ಅಗತ್ಯತೆಯ ಬಗ್ಗೆ ಕಾಳಜಿ ಇರುವುದಿಲ್ಲ — ದೈಹಿಕವಾಗಿ ಮಾನಸಿಕವಾಗಿ ಹಿಂಸಿಸುವುದು — ಅನಾರೋಗ್ಯ, ಪೌಷ್ಟಿಕ ಆಹಾರದ ಕೊರತೆ — ವೈದ್ಯಕೀಯ ಸೌಲಭ್ಯಗಳ ಕೊರತೆ — ಒತ್ತಾಯದ ದುಡಿತ — ಆರ್ಥಿಕ ಮತ್ತು ಸಾಮಾಜಿಕ ಶೋಷಣೆ — ಮಕ್ಕಳ ಬಾಲ್ಯವನ್ನು ಕಸಿದುಕೊಳ್ಳಲಾಗುತ್ತದೆ (ಯಾವುದಾದರೂ ನಾಲ್ಕು) 4 × ½ ***ಅಥವಾ***	2

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	— ವಿಧಿ-17 ಅಸ್ಪೃಶ್ಯತೆಯ ನಿಷೇಧ — 1955 ರ ಅಸ್ಪೃಶ್ಯತ ಅಪರಾಧಗಳ ಕಾಯ್ದೆ — ನಾಗರೀಕ ಹಕ್ಕುಗಳ ರಕ್ಷಣಾ ಕಾಯ್ದೆ — ಸಾರ್ವತಿಕ ವಯಸ್ಕ ಮತದಾನ — ಸಮಾನತೆಯ ಹಕ್ಕು — ಮೀಸಲಾತಿ — ರಾಜ್ಯಗಳಿಗೆ ವಿಶೇಷ ಜವಾಬ್ದಾರಿ (ಯಾವುದಾದರೂ ನಾಲ್ಕು) $4 \times \frac{1}{2}$	2
19.	ಮೊದಲ ಆಂಗ್ಲೋ-ಮರಾಠ ಯುದ್ಧಕ್ಕೆ ಕಾರಣಗಳೇನು ? ***ಉತ್ತರ :*** — ಮೊಘಲ್ ಚಕ್ರವರ್ತಿ ಮೊದಲು ಬ್ರಿಟಿಷರಿಗೆ ನೀಡಿದ್ದ ಕೋರ - ಅಲಹಾಬಾದ್‌ಗಳನ್ನು ಮರಾಠರಿಗೆ ಕೊಟ್ಟನು — ಮರಾಠರು ಮತ್ತು ಬ್ರಿಟಿಷರ ಮಧ್ಯ ವೈರತ್ವ ಉಂಟಾಯಿತು — ಪೇಶ್ವೆಯ ಸ್ಥಾನಕ್ಕೆ ಏರ್ಪಟ್ಟ ಕಲಹ — ರಗೋಬನು ಬ್ರಿಟಿಷರ ಬೆಂಬಲ ಕೋರಿದನು — ಬ್ರಿಟಿಷರು ಈ ಸಂದರ್ಭವನ್ನು ತಮ್ಮ ಲಾಭಕ್ಕೆ ಬಳಸಿಕೊಂಡರು (ಯಾವುದಾದರೂ ನಾಲ್ಕು) $4 \times \frac{1}{2}$	2
20.	ಗೋವಾ ಭಾರತದ ಒಕ್ಕೂಟಕ್ಕೆ ಹೇಗೆ ಸೇರ್ಪಡೆಯಾಯಿತು ? ***ಉತ್ತರ :*** — ಪೋರ್ಚುಗೀಸರ ವಸಾಹತುವಾಗಿದ್ದ ಗೋವಾ ಭಾರತಕ್ಕೆ ಸೇರಬೇಕೆಂದು ನಿರಂತರವಾಗಿ ಚಳವಳಿ ನಡೆಯಿತು	2

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು
	— ಚಳವಳಿಯನ್ನು ಹತ್ತಿಕ್ಕಲು ಪ್ರಯತ್ನಿಸಿದರು — 1955 ರಲ್ಲಿ ದೇಶದ ವಿವಿಧ ಭಾಗಗಳಿಂದ ಸತ್ಯಾಗ್ರಹಿಗಳು ಬಂದರು — 1961 ರಲ್ಲಿ ಭಾರತದ ಸೈನ್ಯ ಮಧ್ಯ ಪ್ರವೇಶಿಸಿ ಗೋವಾವನ್ನು ವಶಪಡಿಸಿಕೊಂಡಿತು	
21.	ಸಾರ್ವಕಾಲಿಕ ಕಾಲುವೆ ಮತ್ತು ಪ್ರವಾಹ ಕಾಲುವೆಗಳ ನಡುವಿನ ವ್ಯತ್ಯಾಸಗಳಾವುವು ? ***ಉತ್ತರ :***	

ಪ್ರವಾಹ ಕಾಲುವೆ	ಸಾರ್ವಕಾಲಿಕ ಕಾಲುವೆ
— ಯಾವುದೇ ರೀತಿಯ ಅಣೆಕಟ್ಟುಗಳನ್ನು ಕಟ್ಟದೆ ನದಿಗಳಿಂದ ನೇರವಾಗಿ ಕಾಲುವೆಗಳನ್ನು ತೋಡಲಾಗುವುದು	— ನದಿಗಳಿಗೆ ಅಣೆಕಟ್ಟು ಜಲಾಶಯಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಿಸಲಾಗುವುದು
— ನದಿಗಳು ತುಂಬಿ ಹರಿಯುವಾಗ ಈ ಕಾಲುವೆಗಳ ಮೂಲಕ ನೀರು ಹರಿಯುವುದು	— ಕೃಷಿ ಭೂಮಿಗೆ ನೀರನ್ನೊದಗಿಸಲು ತೋಡುವ ಕಾಲುವೆಗಳಾಗಿವೆ

1 + 1 — 2

22.	'ಚಹ'ದ ಬೇಸಾಯಕ್ಕೆ ಅವಶ್ಯಕವಿರುವ ಭೌಗೋಳಿಕ ಅಂಶಗಳಾವುವು ? ***ಉತ್ತರ :*** — 21° ಸೆಲ್ಸಿಯಸ್ ಉಷ್ಣಾಂಶ — 150 ರಿಂದ 200 ಸೆಂ.ಮೀ. ವಾರ್ಷಿಕ ಮಳೆ — ಉತ್ಕೃಷ್ಟ ಕೊಳೆತ ಜೈವಿಕಾಂಶ	2

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು
	— ಪರ್ವತದ ಇಳಿಜಾರು — ಮರಳು ಮಿಶ್ರಿತ ಮಣ್ಣು — 1200 ರಿಂದ 2400 ಮೀ. ಎತ್ತರವುಳ್ಳ ಪ್ರದೇಶ (ಯಾವುದಾದರೂ ನಾಲ್ಕು) $4 \times \frac{1}{2}$	
23.	ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳನ್ನು ತಿಳಿಸಿ. ***ಉತ್ತರ :*** — ಜನರ ಜೀವನಮಟ್ಟದ ಸುಧಾರಣೆ — ಬಡತನ ನಿವಾರಣೆ — ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವುದು — ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು — ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವುದು — ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳುವುದು — ಅರ್ಥವ್ಯವಸ್ಥೆಯನ್ನು ಆಧುನೀಕರಿಸುವುದು ಇತ್ಯಾದಿ... (ಯಾವುದಾದರೂ ನಾಲ್ಕು) $4 \times \frac{1}{2}$	2
24.	ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ರಚನೆಯನ್ನು ಕುರಿತು ಬರೆಯಿರಿ. ***ಉತ್ತರ :*** — ಪ್ರತಿ ಜಿಲ್ಲೆಯಲ್ಲಿ ಒಂದು ಆಯೋಗ ಇರುತ್ತದೆ. — ನ್ಯಾಯ ಪೀಠಕ್ಕೆ ರಾಜ್ಯ ಸರ್ಕಾರದಿಂದ ನೇಮಕಗೊಂಡ ನ್ಯಾಯಾಧೀಶರಿರುತ್ತಾರೆ. — ಇಬ್ಬರು ಸದಸ್ಯರು — ಒಬ್ಬರು ಮಹಿಳೆ $4 \times \frac{1}{2}$	2

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
IV.	**ಆರು ವಾಕ್ಯಗಳಲ್ಲಿ ಉತ್ತರಿಸುವುದು :** **9 × 3 = 27**	
25.	ಬಕ್ಸಾರ್ ಕದನದ ಪರಿಣಾಮಗಳನ್ನು ವಿವರಿಸಿ.	
	ಅಥವಾ	
	ಭಾರತದಲ್ಲಿ ಬ್ರಿಟಿಷ್ ಶಿಕ್ಷಣ ವ್ಯವಸ್ಥೆಯು ಬೀರಿದ ಪರಿಣಾಮಗಳನ್ನು ವಿವರಿಸಿ.	
	ಉತ್ತರ :	
	— ಎರಡನೇ ಷಾ ಆಲಂ ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ ದಿವಾನಿ ಹಕ್ಕು ನೀಡಿದನು	
	— ಷಾ ಆಲಂ ವಾರ್ಷಿಕ 26 ಲಕ್ಷ ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ಹಕ್ಕನ್ನೆಲ್ಲ ಬ್ರಿಟಿಷರಿಗೆ ಬಿಟ್ಟುಕೊಟ್ಟನು	
	— ಔದ್‌ನ ನವಾಬ ಯುದ್ಧ ನಷ್ಟ ಪರಿಹಾರವಾಗಿ 50 ಲಕ್ಷರೂಪಾಯಿ ನೀಡಿದನು	
	— ಮೀರ್ ಜಾಫರನ ಮಗನಿಗೆ ವಿಶ್ರಾಂತಿ ವೇತನ ನೀಡಲಾಯಿತು	
	— ಬಂಗಾಳದ ಪೂರ್ಣ ಆಡಳಿತ ಕಂಪನಿಗೆ ಒಳಪಟ್ಟಿತು	
	— ರಾಬರ್ಟ್ ಕ್ಲೈವ್ ಬಂಗಾಳದಲ್ಲಿ 'ದ್ವಿಸರ್ಕಾರ'ವನ್ನು ಜಾರಿಗೆ ತಂದನು $6 \times \frac{1}{2}$	3
	ಅಥವಾ	
	— ಆಧುನಿಕತೆ, ಜಾತ್ಯಾತೀತತೆ, ಪ್ರಜಾಪ್ರಭುತ್ವದ ಆಲೋಚನೆ ಕ್ರಮದ ಬೆಳವಣಿಗೆ	
	— ರಾಷ್ಟ್ರೀಯವಾದಿ ದೃಷ್ಟಿಕೋನದ ಬೆಳವಣಿಗೆ	
	— ಸ್ಥಳೀಯ ಭಾಷೆಗಳಿಗೆ ಪ್ರೋತ್ಸಾಹ	
	— ಭಾರತೀಯ ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ಒಗ್ಗಟ್ಟು (ನಾವಿನ್ಯತೆ)	
	— ವೃತ್ತಪತ್ರಿಕೆಗಳು ಹುಟ್ಟಿ ಬೆಳೆಯಲಾರಂಭಿಸಿದವು	3

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	— ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು — ಆಲೋಚನಾ ನಾವಿನ್ಯತೆ — ಭಾರತೀಯ ಸಂಪ್ರದಾಯ ಮತ್ತು ಸಂಸ್ಕೃತಿಗಳ ಅರಿವು — ವಿವಿಧ ದೇಶಗಳ ಸ್ವಾತಂತ್ರ್ಯ ಹೋರಾಟಗಳಿಂದ ಪ್ರಭಾವಿತರಾದ ಭಾರತೀಯರು (ಯಾವುದಾದರೂ ಆರು) $6 \times \frac{1}{2}$	
26.	ಅರಣ್ಯಗಳು ನಮಗೆ ಹಾಗೂ ಪರಿಸರಕ್ಕೆ ಅತ್ಯಂತ ಉಪಯುಕ್ತವಾಗಿವೆ. ಹೇಗೆ ? **ಅಥವಾ** ಗ್ಲೋಬಲ್ ಪೊಜಿಶನಿಂಗ್ ಸಿಸ್ಟಂ (ಜಿ.ಪಿ.ಎಸ್.) ಹೇಗೆ ಒಂದು ಬಹುಪಯೋಗಿ ತಂತ್ರಜ್ಞಾನವಾಗಿದೆ ? ***ಉತ್ತರ :*** — ಶುದ್ಧ ವಾಯುವನ್ನು ಒದಗಿಸುತ್ತದೆ — ಆಹಾರ ಮತ್ತು ಮೇವು — ಉತ್ತಮ ಮಳೆ ತರಲು ಸಹಾಯಕವಾಗಿದೆ — ಮಣ್ಣಿನ ಸವೆತವನ್ನು ನಿಯಂತ್ರಿಸುತ್ತದೆ — ಪ್ರಾಣಿ, ಪಕ್ಷಿಗಳಿಗೆ ಆಶ್ರಯ ತಾಣವಾಗಿದೆ — ಔಷಧಿಯ ಸಸ್ಯಗಳ ಆಗರವಾಗಿದೆ — ಪ್ರವಾಸಿಗರನ್ನು ಆಕರ್ಷಿಸುತ್ತದೆ — ಉದ್ಯೋಗವಕಾಶಗಳನ್ನು ಒದಗಿಸುತ್ತದೆ — ಜೈವಿಕ ಪರಿಸರ ಸಮತೋಲನವನ್ನು ಕಾಪಾಡುತ್ತದೆ (ಯಾವುದಾದರೂ ಆರು) $6 \times \frac{1}{2}$ **ಅಥವಾ**	3

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	— ಸ್ಪಷ್ಟ ಭೌಗೋಳಿಕ ಸ್ಥಾನ ಗುರುತಿಸಲು ಸಹಾಯಕ — ಅರಣ್ಯ ಹಾಗೂ ಚಾರಣಿಗರಿಗೆ ಸಹಾಯಕ — ಸೈನಿಕರು, ವೈಮಾನಿಕರು, ನಾವಿಕರಿಗೆ ಸಹಕಾರಿ — ಮನೆಬಾಗಿಲ ಸೇವೆ ನೀಡಲು ಸಹಕಾರಿ — ಗೂಗಲ್ ಮ್ಯಾಪ್‌ನ ಬಳಕೆ	3
27.	ಗ್ರಾಮೀಣಾಭಿವೃದ್ಧಿಯ ಮಹತ್ವವನ್ನು ವಿವರಿಸಿ. ***ಅಥವಾ*** ಕೇಂದ್ರ ಸರ್ಕಾರದ ತೆರಿಗೆಯೇತರ ಆದಾಯದ ಮೂಲಗಳನ್ನು ವಿವರಿಸಿ. ***ಉತ್ತರ :*** — ಗ್ರಾಮಗಳ ಅಭಿವೃದ್ಧಿಯಲ್ಲಿ ಗ್ರಾಮದ ಜನರು ಪಾಲ್ಗೊಳ್ಳುವಂತೆ ಮಾಡುವುದು — ಗ್ರಾಮೀಣ ಮೂಲಸೌಕರ್ಯ ಒದಗಿಸುವುದು — ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣಕ್ಕೆ ಪ್ರೋತ್ಸಾಹ — ಆರೋಗ್ಯ ಮತ್ತು ನೈರ್ಮಲ್ಯ ಒದಗಿಸುವುದು — ಗ್ರಾಮೀಣ ಗುಡಿ ಕೈಗಾರಿಕೆಗಳ ಅಭಿವೃದ್ಧಿ — ಬಡತನ ನಿರ್ಮೂಲನ — ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು — ಗ್ರಾಮೀಣ ಕಲೆ ಮತ್ತು ಸಂಸ್ಕೃತಿಯನ್ನು ಶ್ರೀಮಂತಗೊಳಿಸುವುದು — ನಗರ ಸೌಲಭ್ಯಗಳನ್ನು ಗ್ರಾಮಗಳಲ್ಲಿ ಒದಗಿಸುವುದು — ವಸತಿಹೀನರಿಗೆ ಮನೆಗಳನ್ನು ನಿರ್ಮಿಸಿಕೊಡುವುದು — ಗ್ರಾಮೀಣಾಭಿವೃದ್ಧಿ ಪ್ರಕ್ರಿಯೆಯಲ್ಲಿ ಹಳ್ಳಿಗರು ಭಾಗವಹಿಸುವುದು — ಕೃಷಿ, ಸಂಬಂಧಿತ ಚಟುವಟಿಕೆಗಳಿಗೆ ಉತ್ತೇಜನ (ಯಾವುದಾದರೂ ಆರು) $6 \times \frac{1}{2}$ ***ಅಥವಾ***	3

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	— ಭಾರತೀಯ ರಿಸರ್ವ್ ಬ್ಯಾಂಕ್‌ಗಳಿಸುವ ನಿವ್ವಳ ಲಾಭ — ಭಾರತೀಯ ರೈಲ್ವೆಗಳಿಸುವ ನಿವ್ವಳ ಲಾಭ — ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ ಆದಾಯ — ಸಾರ್ವಜನಿಕ ಉದ್ಯಮಗಳು ಗಳಿಸುವ ಆದಾಯ — ನಾಣ್ಯ ಮತ್ತು ಟಂಕಸಾಲೆಯಿಂದ ಬರುವ ಆದಾಯ — ವಿವಿಧ ರೀತಿಯ ಶುಲ್ಕಗಳು ದಂಡಗಳು ಇತ್ಯಾದಿ... $6 \times \frac{1}{2}$	3
28.	ಬ್ಯಾಂಕ್ ಖಾತೆಯನ್ನು ತೆರೆಯುವುದರಿಂದಾಗುವ ಅನುಕೂಲಗಳಾವುವು ? ***ಅಥವಾ*** ಭಾರತದ ಆರ್ಥಿಕತೆಯ ಬೆಳವಣಿಗೆಯಲ್ಲಿ ಉದ್ಯಮಿಗಳ ಪಾತ್ರವೇನು ? ***ಉತ್ತರ :*** — ಸಾರ್ವಜನಿಕರಿಂದ ಠೇವಣಿ ಅಂಗೀಕರಿಸುವುದು — ಸಾಲವನ್ನು ಕೊಡುವುದು — ಹಣವನ್ನು ವರ್ಗಾಯಿಸುವುದು — ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು — ಖರ್ಚು ಕಾರ್ಡ್ ಮತ್ತು ಜಮಾ ಕಾರ್ಡು ಕೊಡುವುದು — ಹಣದ ವಹಿವಾಟನ್ನು ಮಾಡುತ್ತದೆ — ಸಹಿಗಳಿಗೆ ಜವಾಬ್ದಾರಿ ಹಾಕುವುದು — ಸಾಲಪತ್ರ ಮತ್ತು ಜವಾಬ್ದಾರಿ ಪತ್ರ ಕೊಡುವುದು — ಸರ್ಕಾರದ ಹಣಕಾಸಿನ ವ್ಯವಹಾರ ನಿರ್ವಹಿಸುವುದು (ಯಾವುದಾದರೂ ಆರು) $6 \times \frac{1}{2}$ ***ಅಥವಾ***	3

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	— ಜನರ ಉಳಿತಾಯವನ್ನು ಬಂಡವಾಳ ರೂಪದಲ್ಲಿ ಸಂಗ್ರಹಿಸುತ್ತಾರೆ — ಉದ್ಯೋಗಗಳನ್ನು ಒದಗಿಸುತ್ತಾರೆ — ದೇಶದ ಆದಾಯ ಮತ್ತು ತಲಾವರಮಾನವನ್ನು ಹೆಚ್ಚಿಸುತ್ತಾರೆ — ಮಾರುಕಟ್ಟೆಗಳನ್ನು ಅಭಿವೃದ್ಧಿಪಡಿಸುತ್ತಾರೆ — ಉತ್ತಮ ವಸ್ತುಗಳನ್ನು ಕಡಿಮೆ ದರದಲ್ಲಿ ಒದಗಿಸುತ್ತಾರೆ — ಜನರ ಜೀವನಮಟ್ಟ ಉತ್ತಮಗೊಳಿಸಲು ಶ್ರಮಿಸುತ್ತಾರೆ — ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುತ್ತಾರೆ — ಸಮಾಜದ ಏಳಿಗೆಗೆ ಸಹಾಯ ಮಾಡುತ್ತಾರೆ — ದೇಶದ ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತಾರೆ (ಯಾವುದಾದರೂ ಆರು) $6 \times \frac{1}{2}$	3
29.	ಅಲಿಘರ್ ಚಳವಳಿಯ ಉದ್ದೇಶಗಳನ್ನು ತಿಳಿಸಿ. ***ಉತ್ತರ :*** — ಪೂರ್ವ ಮತ್ತು ಪಶ್ಚಿಮಗಳ ವಿಚಾರಗಳ ಸಂಗಮಕ್ಕೆ ಬೆಂಬಲಿಸುವುದು — ಪಾಶ್ಚಾತ್ಯ ಶಿಕ್ಷಣದೊಂದಿಗೆ ಧಾರ್ಮಿಕ ಶಿಕ್ಷಣ ನೀಡುವುದು — ಮುಸಲ್ಮಾನರು ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ವಿಚಾರಗಳನ್ನು ಬದಲಿಸಿಕೊಳ್ಳುವುದು — ಮುಸಲ್ಮಾನ ಸಮುದಾಯಕ್ಕೆ ಆಧುನಿಕ ಶಿಕ್ಷಣ ನೀಡುವುದು — ಸ್ತ್ರೀಯರ ಶಿಕ್ಷಣವನ್ನು ಬೆಂಬಲಿಸುವುದು — ಬಹುಪತ್ನಿತ್ವ ಹಾಗೂ ವಿಧವಾ ವಿವಾಹದ ವಿರೋಧಿ ವಿಚಾರಗಳನ್ನು ಖಂಡಿಸುವುದು $6 \times \frac{1}{2}$	3

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು
30.	1857 ರ ದಂಗೆಯ ವಿಫಲತೆಗೆ ಕಾರಣಗಳನ್ನು ವಿವರಿಸಿ. ***ಉತ್ತರ :*** — ಇಡೀ ಭಾರತವನ್ನು ವ್ಯಾಪಿಸಿದ ಹೋರಾಟವಾಗಿರಲಿಲ್ಲ — ರಾಜರ ಮತ್ತು ಜಮೀನ್ದಾರರ ಸ್ವಹಿತಾಸಕ್ತಿ ಮತ್ತು ಹಕ್ಕುಗಳಿಗಾಗಿ ನಡೆದಿತ್ತು — ಯೋಜಿತ ಹೋರಾಟವಾಗಿರಲಿಲ್ಲ — ಬ್ರಿಟಿಷ್ ಸೈನ್ಯದ ಒಗ್ಗಟ್ಟು ಭಾರತೀಯ ಸೈನಿಕರಲ್ಲಿ ಇರಲಿಲ್ಲ — ದಂಗೆಕಾರರಿಗೆ ಸೂಕ್ತ ಮಾರ್ಗದರ್ಶನವಿರಲಿಲ್ಲ — ವ್ಯವಸ್ಥಿತ ಸಂಘಟನೆಯ ಕೊರತೆ — ಯುದ್ಧ ತಂತ್ರ ಸೂಕ್ತ ನಾಯಕತ್ವ ಮತ್ತು ಶಿಸ್ತಿನ ಕೊರತೆ — ಹೋರಾಟದಲ್ಲಿ ನಿಶ್ಚಿತ ಗುರಿ ಇರಲಿಲ್ಲ — ಹಲವು ದೇಶಿಯ ಸಂಸ್ಥಾನಗಳು ಬ್ರಿಟಿಷರಿಗೆ ನಿಷ್ಠೆ ತೋರಿದರು — ಸಿಪಾಯಿಗಳು ಮಾಡಿದ ಲೂಟಿ, ದರೋಡೆಯಿಂದ ಜನರ ವಿಶ್ವಾಸ ಕಳೆದುಕೊಂಡರು (ಯಾವುದಾದರೂ ಆರು) $6 \times \frac{1}{2}$	3
31.	ಭಾರತ ಸರ್ಕಾರವು ಭಯೋತ್ಪಾದನೆಯ ಸವಾಲನ್ನು ಹೇಗೆ ನಿಗ್ರಹಿಸುತ್ತಿದೆ ? ***ಉತ್ತರ :*** — ರಾಷ್ಟ್ರೀಯ ತನಿಖಾದಳದ ಸ್ಥಾಪನೆ (NIA) — ವಿಶೇಷ ಪಡೆಗಳ ರಚನೆ — ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆ ಪಡೆಗಳು — ಜಾಗತಿಕವಾಗಿ ಭಯೋತ್ಪಾದನೆಗೆ ವಿರೋಧ — ಭಯೋತ್ಪಾದನಾ ನಿಗ್ರಹ ಪಡೆಗಳ ರಚನೆ (ATS)	

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	— ಇಂಟಲಿಜೆನ್ಸ್ ಬ್ಯುರೊ, ಸಂಶೋಧನೆ ಹಾಗೂ ವಿಶ್ಲೇಷಣಾ ಘಟಕ ಸ್ಥಾಪನೆ (IB ಮತ್ತು RAW) — ಗುಪ್ತಚರ ವ್ಯವಸ್ಥೆಯ ಬಲವರ್ಧನೆ — ಹಣಕಾಸು ಗುಪ್ತಚರ ಘಟಕ ಸ್ಥಾಪನೆ — ಭಯೋತ್ಪಾದನೆ ವಿರುದ್ಧದ ಜಾಗತಿಕ ಹೋರಾಟಕ್ಕೆ ಬೆಂಬಲ (ಯಾವುದಾದರೂ ಆರು) $6 \times \frac{1}{2}$	3
32.	ಸಂಘಟಿತ ವಲಯದ ಕೆಲಸಗಾರರು ಮತ್ತು ಅಸಂಘಟಿತ ವಲಯದ ಕೆಲಸಗಾರರ ನಡುವಿನ ವ್ಯತ್ಯಾಸಗಳನ್ನು ವಿವರಿಸಿ. ***ಉತ್ತರ :***	

ಸಂಘಟಿತ ವಲಯದ ಕೆಲಸಗಾರರು	**ಅಸಂಘಟಿತ ವಲಯದ ಕೆಲಸಗಾರರು**
— ನಿಗದಿತ ಕಾನೂನು ಕಾಯ್ದೆಗಳು ಇರುತ್ತದೆ	— ನಿಗದಿತ ಕಾನೂನು ಕಾಯ್ದೆಗಳು ಇರುವುದಿಲ್ಲ
— ಕೆಲಸದ ಭದ್ರತೆ ಇರುತ್ತದೆ	— ಕೆಲಸದ ಭದ್ರತೆ ಇರುವುದಿಲ್ಲ
— ವೈದ್ಯಕೀಯ ಸೌಲಭ್ಯವಿರುತ್ತದೆ	— ವೈದ್ಯಕೀಯ ಸೌಲಭ್ಯಗಳು ಇರುವುದಿಲ್ಲ
— ನಿಗದಿತ ವೇತನ, ವಿರಾಮ ವೇತನವಿದೆ, ನಿವೃತ್ತಿ ವೇತನವಿದೆ ಮತ್ತು ಇತರೆ ಭತ್ಯೆಗಳಿರುತ್ತದೆ	— ನಿಗದಿತ ವೇತನ, ವಿರಾಮ ವೇತನವಿಲ್ಲ, ನಿವೃತ್ತಿ ವೇತನವಿಲ್ಲ ಮತ್ತು ಇತರೆ ಭತ್ಯೆಗಳಿರುವುದಿಲ್ಲ
— ನಿಗದಿತ ಸಮಯ	— ನಿಗದಿತ ಸಮಯವಿಲ್ಲ
— ಬಡ್ತಿ	— ಯಾವುದೇ ಬಡ್ತಿ ಇರುವುದಿಲ್ಲ
— *ಉದಾ. :* ಸೈನಿಕರು, ಸರ್ಕಾರಿ ನೌಕರರು ಇತ್ಯಾದಿ...	— *ಉದಾ. :* ಮನೆಗೆಲಸದವರು, ಕೃಷಿಕೂಲಿ ಕಾರ್ಮಿಕರು ಇತ್ಯಾದಿ...
(ಯಾವುದಾದರೂ ಮೂರು) 3×1	3

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
33.	ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಕೈಗೊಳ್ಳಬೇಕಾದ ಪರಿಹಾರೋಪಾಯಗಳು ಯಾವುವು ? ***ಉತ್ತರ :*** — ಸಿದ್ಧಪಡಿಸಿದ ಆಹಾರ — ಆಹಾರದ ಹಂಚಿಕೆ — ಶುದ್ಧ ಕುಡಿಯುವ ನೀರಿನ ಪೂರೈಕೆ — ಔಷಧಿ ಹಂಚಿಕೆ — ತಾತ್ಕಲಿಕ ವಸತಿ ವ್ಯವಸ್ಥೆ — ಅಗತ್ಯ ಮೂಲಭೂತ ಸೌಕರ್ಯಗಳನ್ನು ತುರ್ತಾಗಿ ಒದಗಿಸುವುದು — ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ ನೆರವನ್ನು ಪಡೆಯುವುದು — ಮಾಧ್ಯಮಗಳ ಮೂಲಕ ಜನರಿಗೆ ಎಚ್ಚರಿಕೆಯನ್ನು ನೀಡವುದು — ಅಗತ್ಯ ಸೇವೆಗಳು (ಯಾವುದಾದರೂ ಆರು) $6 \times \frac{1}{2}$	3
V.	**ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು : 4 × 4 = 16**	
34.	ನಾಲ್ವಡಿ ಕೃಷ್ಣರಾಜ ಒಡೆಯರ ಸಾಧನೆಗಳನ್ನು ವಿವರಿಸಿ. ***ಅಥವಾ*** ಸ್ವಾಮಿ ದಯಾನಂದ ಸರಸ್ವತಿಯವರ ಕೊಡುಗೆಗಳನ್ನು ವಿವರಿಸಿ. ***ಉತ್ತರ :*** — ಉಚಿತ ಪ್ರಾಥಮಿಕ ಶಿಕ್ಷಣ — ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಆದ್ಯತೆ	

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು
	— ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ — ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ — ವಿದೇಶದಲ್ಲಿ ವಿದ್ಯಾಭ್ಯಾಸಕ್ಕೆ ಹೋಗುವವರಿಗೆ ವಿದ್ಯಾರ್ಥಿ ವೇತನ — ಭಾರತೀಯ ವಿಜ್ಞಾನ ಸಂಸ್ಥೆಯ ಸ್ಥಾಪನೆ — ನೀರಾವರಿಯ ಅಭಿವೃದ್ಧಿ — ಹೊಸ ರೈಲು ಮಾರ್ಗಗಳ ನಿರ್ಮಾಣ — ಸಣ್ಣ ಮತ್ತು ದೊಡ್ಡ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆ — ಕಬ್ಬಿಣ ಮತ್ತು ಉಕ್ಕು, ಪೇಪರ್, ಸಕ್ಕರೆ, ಗಂಧದ ಎಣ್ಣೆ, ಸಾಬೂನು ಮತ್ತು ರಸಗೊಬ್ಬರದ ಕೈಗಾರಿಕೆಗಳ ಸ್ಥಾಪನೆ — ನ್ಯಾಯ ವಿಧಾಯಕ ಸಭೆಯ ರಚನೆ (ಯಾವುದಾದರೂ ಎಂಟು) 8 × ½ **ಅಥವಾ** — ಆರ್ಯ ಸಮಾಜವನ್ನು ಸ್ಥಾಪಿಸಿದರು — ವೇದಗಳು ಸತ್ಯ ಮತ್ತು ಜ್ಞಾನದ ಮೂಲವೆಂದರು — 'ವೇದಗಳಿಗೆ ಹಿಂತಿರುಗಿ' ಎಂದು ಘೋಷಿಸಿದರು — ವಿಗ್ರಹಾರಾಧನೆ, ಜಾತಿ ಪದ್ಧತಿಯ ಖಂಡನೆ — ವಿಧವಾ ವಿವಾಹವನ್ನು ಪ್ರೋತ್ಸಾಹಿಸಿದರು	4

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು
	— ಸ್ವದೇಶಿ ವಸ್ತುಗಳ ಬಳಕೆಗೆ ಕರೆ ನೀಡಿದರು — ಸತ್ಯಾರ್ಥ ಪ್ರಕಾಶ ಕೃತಿ ರಚಿಸಿದರು — ಶುದ್ಧಿ ಚಳವಳಿ ಪ್ರಾರಂಭಿಸಿದರು — 'ಭಾರತೀಯರಿಗೆ ಭಾರತ' ಎಂದು ಘೋಷಿಸಿದರು (ಯಾವುದಾದರೂ ಎಂಟು) 8 × ½	4
35.	ಮಣ್ಣಿನ ಸಂರಕ್ಷಣೆಯು ಅತ್ಯಂತ ಅವಶ್ಯಕವಾಗಿದೆ. ಏಕೆ ? **ಅಥವಾ** "ಉನ್ನತ ತಂತ್ರಜ್ಞಾನವು ಹಲವಾರು ಬದಲಾವಣೆಗಳನ್ನು ತಂದಿದೆ." ಹೇಗೆ ? ***ಉತ್ತರ :*** — ಮಣ್ಣಿನ ಸವೆತದಿಂದ ನದಿಗಳಲ್ಲಿ ಹೂಳು — ನದಿಗಳಲ್ಲಿ ಪ್ರವಾಹ ಉಂಟಾಗುತ್ತದೆ — ನದಿಗಳು ಪಾತ್ರವನ್ನು ಬದಲಿಸುತ್ತದೆ — ನೀರಿನ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತದೆ — ಭೂಮಿಯಲ್ಲಿ ಇಂಗುವ ನೀರಿನ ಪ್ರಮಾಣ ಕಡಿಮೆಯಾಗುವುದು — ಸ್ವಾಭಾವಿಕ ಚಿಲುಮೆಗಳ ಭತ್ತಿ ಹೋಗುತ್ತದೆ — ವ್ಯವಸಾಯದ ಉತ್ಪಾದನೆಯು ಕಡಿಮೆಯಾಗುತ್ತದೆ 4 × 1 **ಅಥವಾ** — ಟೆಲಿಫೋನ್ — ಅಂತರ್ಜಾಲ ಸಂಪರ್ಕ	4

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು
	— ರಕ್ಷಣಾ ಇಲಾಖೆಗೆ ಸಂಬಂಧಿಸಿದ ಫೋನ್	
	— ಯುದ್ಧ ಸಾಮಗ್ರಿಗಳ ತಯಾರಿಕೆ	
	— ಪರಮಾಣು ಬಾಂಬ್ ತಯಾರಿಕೆ	
	— ಉಪಗ್ರಹ ಉಡಾವಣೆ	
	— ಸರ್ಕಾರಿ ಕಛೇರಿಗಳಲ್ಲಿ ಪಾರದರ್ಶಕ ಆಡಳಿತ	
	— ಇ-ಆಡಳಿತ	
	— ಚಂದ್ರನ ಮೇಲೆ ಪಾದಾರ್ಪಣೆ (ಚಂದ್ರಯಾನ)	
	— ಜಾಗತಿಕ ಆರ್ಥಿಕ ವ್ಯವಸ್ಥೆಯ ಸುಧಾರಣೆ	
	— ಕೃತಕ ಬುದ್ಧಿಮತ್ತೆಯ ಬಳಕೆ	
	— ಸಕಾಲ, ನೆಮ್ಮದಿ, ಜನಸ್ಪಂದನ	
	(ಯಾವುದಾದರೂ ಎಂಟು) 8 × ½	4
36.	ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸ್‌ರವರ ಪಾತ್ರವು ಪ್ರಮುಖ ಮೈಲಿಗಲ್ಲಾಗಿದೆ. ಹೇಗೆ ?	
	ಉತ್ತರ :	
	— ನಾಗರೀಕ ಸೇವಾ ಪರೀಕ್ಷೆಯಲ್ಲಿ 4ನೇ ರ್‍ಯಾಂಕ್	
	— ಬ್ರಿಟಿಷ್ ಸರ್ಕಾರದ ಪ್ರತಿಷ್ಠಿತ ಹುದ್ದೆಯನ್ನು ತ್ಯಜಿಸಿದರು	
	— ವಿದೇಶದಲ್ಲಿ ನೆಲೆಗೊಂಡ ಭಾರತೀಯರನ್ನು ಸಂಘಟಿಸಲು ಪ್ರಯತ್ನಿಸಿದರು	
	— ವಿದೇಶಗಳ ಪ್ರವಾಸ ಬೆಳೆಸಿ ತಾಯ್ನಾಡಿಗೆ ತಮ್ಮ ಬೆಂಬಲ ನೀಡಲು ಪ್ರಯತ್ನಿಸಿದರು	

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು
	— 1934 ರಲ್ಲಿ ಜವಾಹರಲಾಲ್ ನೆಹರೂ ಮತ್ತು ಸುಭಾಷ್‌ಚಂದ್ರ ಬೋಸರು ಕಾಂಗ್ರೇಸ್ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದರು — 1938 ರಲ್ಲಿ ಹರಿಪುರ ಅಧಿವೇಶನದಲ್ಲಿ ಕಾಂಗ್ರೇಸ್‌ನ ಅಧ್ಯಕ್ಷರಾದರು — ಗಾಂಧೀಜಿ ಮತ್ತು ಬೋಸರ ನಡುವೆ ಭಿನ್ನಾಭಿಪ್ರಾಯ ಮೂಡಿತು — 1939 ರಲ್ಲಿ ತ್ರಿಪುರ ಕಾಂಗ್ರೆಸ್‌ನ ಅಧ್ಯಕ್ಷರಾದರು — ಇವರು ಕಾಂಗ್ರೆಸ್‌ನಿಂದ ಹೊರಬಂದರು — 'ಫಾರ್ವರ್ಡ್ ಬ್ಲಾಕ್' ಎಂಬ ಹೊಸ ಪಕ್ಷವನ್ನು ಕಟ್ಟಿದರು — ಗೃಹಬಂಧನದಿಂದ ತಪ್ಪಿಸಿಕೊಂಡು ಜರ್ಮನಿಗೆ ತೆರಳಿದರು — ಹಿಟ್ಲರ್‌ನ ಬೆಂಬಲವನ್ನು ಗಳಿಸಿದರು — ಆಜ಼ಾದ್ ಹಿಂದ್ ರೇಡಿಯೊ ಮೂಲಕ ಭಾಷಣಗಳನ್ನು ಪ್ರಚಾರ ಮಾಡಿದರು — ರಾಸ್ ಬಿಹಾರಿ ಬೋಸರೊಡನೆ ಕೈ ಜೋಡಿಸಿ ಭಾರತೀಯ ರಾಷ್ಟ್ರೀಯ ಸೈನ್ಯದ ಸ್ಥಾಪನೆ — ದೆಹಲಿ ಚಲೋ ಕರೆ — ರಂಗೂನ್‌ನ ಮೂಲಕ ದೆಹಲಿಯನ್ನು ವಶಪಡಿಸಿಕೊಳ್ಳುವ ತಂತ್ರ — ಬರ್ಮಾದ ಮೇಲೆ ದಾಳಿ — ಸುಭಾಷರು ವಿಮಾನ ಅಪಘಾತದಲ್ಲಿ ಮಡಿದರು (ಯಾವುದಾದರೂ ಎಂಟು) $8 \times \frac{1}{2}$	4

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
37.	ಕೋಮವಾದವು ದೇಶದ ಏಕತೆ ಮತ್ತು ಸಮಗ್ರತೆಗೆ ಮಾರಕವಾಗಿದೆ. ಹೇಗೆ ? ***ಉತ್ತರ :*** — ಸಮಾಜದ ವಿಭಜನೆ — ಪರಸ್ಪರ ಅಪನಂಬಿಕೆ — ಸಮಾಜದಲ್ಲಿ ಗುಂಪುಗಾರಿಕೆ — ಆರ್ಥಿಕ ವೈಷಮ್ಯ — ರಾಜಕೀಯ ದ್ವೇಷ — ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆಯನ್ನು ಭಂಗಪಡಿಸುತ್ತದೆ — ಜೀವ ಮತ್ತು ಆಸ್ತಿಪಾಸ್ತಿಗಳ ನಾಶಕ್ಕೆ ಕಾರಣವಾಗುತ್ತದೆ — ಧಾರ್ಮಿಕ ಗುಂಪುಗಳ ಮಧ್ಯ ದ್ವೇಷ ಭಾವನೆಯನ್ನು ಉಂಟು ಮಾಡುತ್ತದೆ — ದೈಹಿಕ ಹಲ್ಲೆ — ಸಾಮಾಜಿಕ ಅಶಾಂತಿ (ಯಾವುದಾದರೂ ಎಂಟು) $8 \times \frac{1}{2}$	4
VI. 38.	**ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಈ ಕೆಳಗಿನ ಯಾವುದಾದರೂ ಐದನ್ನು ಗುರುತಿಸುವುದು : $5 \times 1 = 5$** a) ಕೊಂಕಣ ತೀರ b) ನರ್ಮದಾ ನದಿ	

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು

c) ಕೈಗಾ

d) ಕೋಲ್ಕತ್ತಾ

e) ಸೇಲಂ

f) $23°30'$ ಉತ್ತರ ಅಕ್ಷಾಂಶ


g) ಭಾಕ್ರಾ-ನಂಗಲ್ ಅಣೆಕಟ್ಟು

h) ಕನ್ಯಾಕುಮಾರಿ

i) ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

j) ಕೊಚ್ಚಿ

ಉತ್ತರ :



ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ	ಅಂಕಗಳು
	ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : ***(ಪ್ರಶ್ನೆ ಸಂಖ್ಯೆ 38 ರ ಬದಲಿಗೆ)*** ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಉದ್ದೇಶಗಳೇನು ? ***ಅಥವಾ*** ಹಿಮಾಲಯ ಪರ್ವತಗಳ ಪ್ರಯೋಜನಗಳೇನು ? ***ಉತ್ತರ :*** — ನೀರಾವರಿ ಸೌಲಭ್ಯ ಒದಗಿಸುವುದು — ಜಲವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು — ನದಿಗಳ ಪ್ರವಾಹವನ್ನು ನಿಯಂತ್ರಿಸುವುದು — ನೌಕಾಯಾನದ ಸೌಲಭ್ಯವನ್ನು ಒದಗಿಸುವುದು — ಗೃಹಬಳಕೆ ಹಾಗೂ ಕೈಗಾರಿಕೆಗಳಿಗೆ ನೀರನ್ನು ಒದಗಿಸುವುದು — ಮಣ್ಣಿನ ಸವಕಳಿಯನ್ನು ನಿಯಂತ್ರಿಸುವುದು — ಮೀನುಗಾರಿಕೆಯ ಅಭಿವೃದ್ಧಿ ಮಾಡುವುದು — ಅರಣ್ಯಸಂಪತ್ತು ವೃದ್ಧಿಸುವುದು — ಮನರಂಜನೆ — ಒಳನಾಡಿನ ಜಲಸಾರಿಗೆ $10 \times \frac{1}{2}$ ***ಅಥವಾ*** — ಜನಜೀವನದ ಮೇಲೆ ಅಪಾರ ಪ್ರಭಾವಬೀರಿದೆ — ಭಾರತಕ್ಕೆ ರಕ್ಷಣೆ — ಉತ್ತರ ಏಷ್ಯಾದಿಂದ ಬೀಸುವ ಶೀತಗಾಳಿ ತಡೆಯುತ್ತದೆ	5

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯ ಮಾಪನ		ಅಂಕಗಳು
	— ನದಿಗಳ ಉಗಮಸ್ಥಾನ		
	— ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲ		
	— ವಿಶಾಲವಾದ ಮೈದಾನ ನಿರ್ಮಿಸಿದೆ		
	— ವೈವಿಧ್ಯಮಯ ಸಸ್ಯ ಮತ್ತು ಪ್ರಾಣಿ ಸಂಕುಲಕ್ಕೆ ಆಶ್ರಯ		
	— ಅಪಾರವಾದ ಖನಿಜ ಸಂಪನ್ಮೂಲವಿದೆ		
	— ಧಾರ್ಮಿಕ ಕೇಂದ್ರಗಳು *ಉದಾ.:* ಬದರಿ, ಕೇದಾರ		
	— ಪ್ರವಾಸೋದ್ಯಮ		
	— ಗಿರಿಧಾಮಗಳು		
	— ಪರ್ವತ ಕಣಿವೆಗಳು		
	— ಜಗತ್ತಿನಲ್ಲಿಯೇ ಎತ್ತರವಾದ ಶಿಖರಗಳು	$10 \times \frac{1}{2}$	5